**ದಿನಾಂಕಃ 04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ವಕೀಲರಾದ ಶ್ರೀ YJR ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಜವಿರುತ್ತದೆ. ಅದಕ್ಕೆ ನನ್ನ ಸಹಿ ಇದ್ದು ಅದು ನನ್ನ ಮಾಹಿತಿ ಪ್ರಕಾರ ಸರಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಗಳು ಈ ಕೆಳಕಂಡಂತೆ ಗುರುತಿಸಲಾಯಿತು.

| | | |
|---|---|---|
| **ನಿಡಿ-47** | ಃ | ದಿನಾಂಕಃ 08-12-2010 ರಂದು ಭಾಗ್ಯನಗರ ಸರ್ವೆ ನಂ.91/2 ರಲ್ಲಿಯ ಪ್ಲಾಟ್ ನಂ.44 ರ ಕುರಿತು ಅಶೋಕ ಶೇಖರಯ್ಯ ಭಜಾರಮಠ ಅವರು ಸಾಕ್ಷಿದಾರ ರಾಜಾ ಹುಸೇನ್ ತಂದೆ ಜಲಾಲ್ ಸಾಬ್ ಕುಕನೂರು ಇವರಿಗೆ ಬರೆದುಕೊಟ್ಟ ಮೂಲ ಖರೀದಿ ಪತ್ರ. |
| **ನಿಡಿ-48** | ಃ | ಎರಡು ತೆರಿಗೆ ಕಟ್ಟಿದ ರಶೀದಿ. |
| **ನಿಡಿ-49** | ಃ | ಋಣಭಾರ ರಹಿತ ಪ್ರಮಾಣ ಪತ್ರ. |
| **ನಿಡಿ-50** | ಃ | ಭಾಗ್ಯನಗರ ಆಸ್ತಿ ನಂ.44 ರ 2012-2013 ನೇ ಸಾಲಿನ ತೆರಿಗೆ ರಿಜಿಸ್ಟರ್ ಪ್ರತಿ. |

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ CSK ವಕೀಲರಿಂದಃ**

**ಶ್ರೀ CSK. ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**